ಇಂದಿರಾ ಭವನ, ಕುಕನೂರು, ಕಾಸನ ಕಂಡಿ ಪ್ರದೇಶದಲ್ಲಿ ನೆಡುತೋಪುಗಳನ್ನು ಬೆಳೆಸಲಾಗಿದೆ. ಅಲ್ಲದೆ ಇಲ್ಲಿ ವಲಯ ಅರಣ್ಯಾಧಿಕಾರಿಯವರ ಕಛೇರಿಗೆ ಕಟ್ಟಡ, ಹಾಗೂ ಅರಣ್ಯ ಸಿಬ್ಬಂದಿಯವರ ವಸತಿ ಗೃಹಗಳನ್ನು ಕಟ್ಟಿಸಲಾಗಿದ್ದು ಸಿಬ್ಬಂದಿಯವರು ಅರಣ್ಯ ಸಂರಕ್ಷಣೆ ಮತ್ತು ಅಭಿವೃದ್ಧಿಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ. ಮುನಿರಾಬಾದ್ ನಗರವು ಕೊಪ್ಪಳದಿಂದ ಕೇವಲ 30 ಕಿ.ಮೀ. ದೂರದಲ್ಲಿದೆ. ಕೊಪ್ಪಳದಲ್ಲಿ ವಲಯ ಅರಣ್ಯಾಧಿಕಾರಿಯವರ ಕಛೇರಿಯನ್ನು ಸ್ಥಾಪಿಸಿದ್ದಲ್ಲಿ, ಅಲ್ಲಿ ಮೂಲ ಸೌಕರ್ಯಗಳಿಲ್ಲದೆ ಕಛೇರಿ ಸ್ಥಾಪಿಸಲು ಮತ್ತು ನೌಕರರ ವಸತಿ ಗೃಹಗಳನ್ನು ಬಾಡಿಗೆಗೆ ಪಡೆಯಬೇಕಾಗಿರುವುದರಿಂದ ಸರ್ಕಾರಕ್ಕೆ ಹೆಚ್ಚಿನ ವೆಚ್ಚ ತಗಲುತ್ತದೆ. ಅಲ್ಲದೆ ಸಸ್ಯಕ್ಷೇತ್ರ ಸ್ಥಾಪಿಸಲು ಮುನಿರಾಬಾದ್‌ನಲ್ಲಿರುವಂತೆ ಇಲ್ಲಿ ಅಷ್ಟು ಸೌಕರ್ಯ ಇರುವುದಿಲ್ಲ. ಮುನಿರಾಬಾದ್‌ನಲ್ಲಿ ಕಛೇರಿ ಕೆಲಸ ಹಾಗೂ ಅರಣ್ಯೀಕರಣ ಕೆಲಸಕ್ಕೆ ಅವಶ್ಯವಿರುವ ಮೂಲ ಸೌಕರ್ಯಗಳು ಲಭ್ಯವಿರುತ್ತದೆ.

ಪ್ರಸ್ತುತ ಮುನಿರಾಬಾದ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಲಯ ಅರಣ್ಯಾಧಿಕಾರಿ ಕಛೇರಿಯನ್ನು ಕೊಪ್ಪಳಕ್ಕೆ ಸ್ಥಳಾಂತರಿಸಬೇಕೆಂದು ಸಾರ್ವಜನಿಕರಿಂದ ಯಾವುದೇ ಮನವಿಗಳು ಬಂದಿರುವುದಿಲ್ಲ. ಮುನಿರಾಬಾದ್‌ನಲ್ಲಿ ಲಭ್ಯವಿರುವ ಮೂಲ ಸೌಕರ್ಯಗಳನ್ನು ಗಮನದಲ್ಲಿ ಇಟ್ಟುಕೊಂಡು ಹಾಗೂ ಸಾರ್ವಜನಿಕ ಮೂಲಗಳಿಂದ ಕಛೇರಿಯನ್ನು ಸ್ಥಳಾಂತರಿಸಲು ಮನವಿಗಳಿಲ್ಲದ ಕಾರಣ ಕೊಪ್ಪಳ ವಲಯ ಅರಣ್ಯಾಧಿಕಾರಿಯ ಕೇಂದ್ರ ಸ್ಥಾನವನ್ನು ಮುನಿರಾಬಾದ್‌ನಲ್ಲಿ ಮುಂದುವರಿಸುವುದು ಸೂಕ್ತ.

(4) ವಿಜಾಪುರ ನಗರದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ.

ಶ್ರೀ ಬಸನಗೌಡ ಆರ್. ಪಾಟೀಲ್ (ಬಿಜಾಪುರ) :- ಮಾನ್ಯ ಅಧ್ಯಕ್ಷರೇ, ವಿಜಾಪುರ ನಗರದಲ್ಲಿರುವ ಸರ್ಕಾರಿ ಪದವೀಪೂರ್ವ ಕಾಲೇಜು (ಬಾಲಕಿಯರು) ದಲ್ಲಿ ಶಿಕ್ಷಕರ (1) ಹುದ್ದೆ ಶಿಕ್ಷಕೇತರ 9 ಹುದ್ದೆ ಹಾಗೂ ಬಾಲಕರ ಕಾಲೇಜುದಲ್ಲಿ ಶಿಕ್ಷಕರ (1) ಹುದ್ದೆ ಶಿಕ್ಷಕೇತರ (2) ಹುದ್ದೆ ಈ ರೀತಿಯಾಗಿ ಖಾಲಿ ಇರುವುದರಿಂದ ವಿದ್ಯಾರ್ಥಿ ವಿದ್ಯಾರ್ಥಿನಿಯರ ಅಭ್ಯಾಸದ ಮೇಲೆ ತೀವ್ರ ಪರಿಣಾಮವಾಗುತ್ತಿದ್ದು, ಫಲಿತಾಂಶದ ಮೇಲೆ ಪರಿಣಾಮವಾಗುತ್ತಿದೆ. ಸಿಬ್ಬಂದಿ ವರ್ಗದ ಕೊರತೆಯಿಂದ ವಿದ್ಯಾಲಯದ ಇತರೇ ಕಾರ್ಯಗಳಿಗೆ ತೀವ್ರ ಅನಾನುಕೂಲವಾಗುತ್ತಿದ್ದು ಸರ್ಕಾರ ಆದಷ್ಟು ಬೇಗನೇ ನೇಮಕಾತಿ ಆದೇಶಗಳನ್ನು ಹೊರಡಿಸಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :- ಮಾನ್ಯ ಉಪಾಧ್ಯಾಕ್ಷರೇ, ಬಿಜಾಪುರ ನಗರದಲ್ಲಿ ಬಾರಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಹಿಂದಿ ಮತ್ತು ಬಾಲಕರ ಪದವಿ ಪೂರ್ವ ಕಾಲೇಜಿನಲ್ಲಿ ಜೀವಶಾಸ್ತ್ರ ಉಪನ್ಯಾಸಕರ ಹುದ್ದೆ ಖಾಲಿ ಇರುವುದು 864 ಉಪನ್ಯಾಸಕರ ಹುದ್ದೆಗಳನ್ನು

ತುಂಬಲು ಅಭ್ಯರ್ಥಿಗಳ ಆಯ್ಕೆಯ ಪ್ರಕ್ರಿಯೆ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ನಡೆಯುತ್ತಿದ್ದು ಲೋಕಸೇವಾ ಆಯೋಗದಿಂದ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿ ಬಂದ ತಕ್ಷಣ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು. ಸಧ್ಯಕ್ಕೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಮೀಪದ ಕಿರಿಯ ಕಾಲೇಜುಗಳಲ್ಲಿರುವ ಉಪನ್ಯಾಸಕರುಗಳನ್ನು ಖಾಲಿ ಇರುವ ಶಿಕ್ಷಕೇತರ ಸಿಬ್ಬಂದಿಯನ್ನು ಈಗ ಆರ್ಥಿಕ ಮಿತವ್ಯಯದ ಆದೇಶ ಜಾರಿಯಲ್ಲಿರುವುದರಿಂದ ತುಂಬಲು ಸಾಧ್ಯವಾಗಲಿಲ್ಲ.

(5) ಕುಂದಾಪುರ ಪುರಸಭೆಗೆ ಒಳಚರಂಡಿ ಯೋಜನೆ ಮಂಜೂರು.

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ) :- ಮಾನ್ಯ ಉಪಾಧ್ಯಕ್ಷರೇ, ಕುಂದಾಪುರ ತಾಲ್ಲೂಕಿನ ಪುರಸಭೆಯಲ್ಲಿ ಒಂದು ಬದಿಯಲ್ಲಿ ಸಮುದ್ರವಿದ್ದು, ಇನ್ನೊಂದು ಬದಿಯಲ್ಲಿ ಹೊಳೆಯಿದ್ದು, ಬಹಳಷ್ಟು ವರ್ಷಗಳಿಂದ ಒಳಚರಂಡಿಯಾಗಿ ಬೇಡಿಕೆಯನ್ನು ಸಾರ್ವಜನಿಕರ ಒತ್ತಡ ಇರುವುದರಿಂದ, ಆದಷ್ಟು ಶೀಘ್ರ ಕುಂದಾಪುರ ಪುರಸಭೆಗೆ ಒಳಚರಂಡಿ ಯೋಜನೆಯನ್ನು ಮಂಜೂರು ಮಾಡಬೇಕೆಂದು ಮತ್ತು ಪುರಸಭೆಯಲ್ಲಿ ಕುಡಿಯುವ ನಲ್ಲಿನೀರಿನ ಯೋಜನೆ ಇದ್ದರೂ ಸಹ ನಾಗರೀಕರಿಗೆ ಕುಡಿಯಲು ಅಗತ್ಯವಿರುವಷ್ಟು ನೀರು ಒದಗಿಸಲು ಆಗದಿರುವುದರಿಂದ ಅತೀ ಸಮೀಪದಲ್ಲಿ ಹರಿಯುವ ವರಾಹಿ ಹೊಳೆಯ ನೀರನ್ನು ಶುದ್ಧೀಕರಿಸಿ ಕುಂದಾಪುರ ಪುರಸಭೆಗೆ ಕುಡಿಯುವ ನೀರಿನ ಯೋಜನೆ ಮಾಡುವುದರೊಂದಿಗೆ ಒಳಚರಂಡಿ ಯೋಜನೆಯನ್ನು ಮಂಜೂರು ಮಾಡಬೇಕಾಗಿ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :- ಸನ್ಮಾನ್ಯ ಉಪಾಧ್ಯಕ್ಷರೇ, ಕುಂದಾಪುರ ಪಟ್ಟಣದ ಜನಸಂಖ್ಯೆಯು 1991 ರ ಜನಗಣತಿಯ ಪ್ರಕಾರ 28,477 ಆಗಿದ್ದು ಹಾಲಿ ಜನಸಂಖ್ಯೆಯು 32,000 ಇರಬಹುದು. ಈ ಪಟ್ಟಣಕ್ಕೆ ಹಾಲಿ ನೀರು ಸರಬರಾಜು ಮುಖ್ಯವಾಗಿ 5 ತೆರೆದ ಬಾವಿಗಳಿಂದ ಹಾಗೂ 4 ಕೊಳವೆಬಾವಿಗಳಿಗೆ ಕೈಪಂಪು ಅಳವಡಿಸಿ ಸರಬರಾಜು ಆಗುತ್ತಿದೆ. ಹಾಲಿ ದಿನಂಪ್ರತಿ ತಲಾ 30 ಲೀಟರ್ ನೀರು ಸರಬರಾಜು ಮಾಡಲಾಗುತ್ತಿದ್ದು ನಿರ್ವಹಣೆಯನ್ನು ಪುರಸಭೆಯವರೇ ಮಾಡುತ್ತಿದ್ದಾರೆ.

ಈ ಪಟ್ಟಣಕ್ಕೆ ನೀರು ಸರಬರಾಜು ಉತ್ತಮ ವಾರಾಹಿ ನದಿಯನ್ನು ಮೂಲವಾಗಿ ಇಟ್ಟುಕೊಂಡು ಒಂದು ಯೋಜನೆಯನ್ನು ತಯಾರಿಸಲು ಪುರಸಭೆಯವರಿಂದ ಬೇಡಿಕೆ ಬಂದಿದ್ದು ಯೋಜನೆಯನ್ನು ತಯಾರಿಸಲು ತನಿಖೆಯನ್ನು ಮಾಡಿ ಅಂದಾಜನ್ನು ತಯಾರಿಸಲು ಕ್ರಮ ಕೈಗೊಳ್ಳಲಾಗುವುದು.

ಈ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಪ್ರಸ್ತಾವನೆ ಮಾಡಲು ನೀರು ಸರಬರಾಜಿನ ಕನಿಷ್ಠ ಪ್ರಮಾಣವು 100 ಲೀಟರ್ ಇರಬೇಕು. ಆದ್ದರಿಂದ ನೀರಿನ ಪ್ರಮಾಣವನ್ನು ಹೆಚ್ಚಿಸಿದ ನಂತರ ಈ ಯೋಜನೆಯನ್ನು ಕೈಗೊಳ್ಳುವುದು ಉಚಿತ. ಆದರೂ ಪುರಸಭೆಯವರು ಬೇಡಿಕೆಯನ್ನು ಸಲ್ಲಿಸಿದ ಮೇರೆಗೆ ಯೋಜನೆಯನ್ನು